## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 27-08-2022

### ಜನವಾಡಾ ಪೊಲೀಸ್ ಠಾಣೆ. ಅಪರಾಧನಂ 90/2022 ಕಲಂ 32(3), 15 ಕೆಇ ಕಾಯ್ದೆ :-

ದಿನಾಂಕ: 26/08/2022 ರಂದು ಪಿಎಸ್.ಐ ರವರು ಠಾಣೆಯಲ್ಲಿದ್ದಾಗ ಬಸಂತಪೂರ ಗ್ರಾಮದಲ್ಲಿ ಒಂದು ಕಿರಾಣಾ ಅಂಗಡಿಯ ಮುಂದುಗಡೆ ಅಂಗಡಿಯ ಮಾಲೀಕ ಸಾರ್ವಜನಿಕರಿಗೆ ಸರಾಯಿ ಕುಡಿಯಲು ಅನುವು ಮಾಡಿಕೊಡುತ್ತಿದ್ದಾನೆ ಅಂತ ಖಚಿತ ಬಾತ್ಮಿ ಬಂದ ಮೇರೆಗೆ ನೋಡಿದಾಗ ಅಂಗಡಿಯ ಮಾಲೀಕನು ಸಾರ್ವಜನಿಕರು ಓಡಾಡುವ ಸ್ಥಳದಲ್ಲಿ ಸರಾಯಿ ಪೌಚ್ಗಳನ್ನಿಟ್ಟುಕೊಂಡು ತಾನು ಸರಾಯಿ ಕುಡಿಯುತ್ತಿದುದ್ದಲ್ಲದೇ ಸಾರ್ವಜನಿಕರಿಗೂ ಸಹ ಸರಾಯಿ ಕುಡಿಯಲು ಅನುವು ಮಾಡಿಕೊಡುತ್ತಿದ್ದುದನ್ನು ಕಂಡು ಪಂಚರ ಸಮಕ್ಷಮ ಸದರಿಯವನ ಮೇಲೆ 15:00 ಗಂಟೆಗೆ ದಾಳಿ ಮಾಡಿ ಸದರಿಯವನಿಗೆ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ ಈತ ತನ್ನ ಹೆಸರು ಮನೋಹರರಾವ ತಂದೆ ಧೂಳಬಾರಾವ ಪಾಟೀಲ್ ವಯ: 52 ವರ್ಷ ಉ: ಕಿರಾಣಾ ಅಂಗಡಿ ಜಾ: ಮರಾಠಾ ಸಾ: ಬಸಂತಪೂರ ಗ್ರಾಮ ಅಂತ ತಿಳಿಸಿದ್ದು ತಾನು ಕಿರಾಣಾ ಅಂಗಡಿಯ ಮಾಲೀಕನಿರುವುದಾಗಿ ತಿಳಿಸಿರುತ್ತಾನೆ. ಪರಿಶೀಲಿಸಿ ನೋಡಲಾಗಿ ಅಂಗಡಿಯ ಮುಂದುಗಡೆ ಕಟ್ಟೆಯ ಮೇಲೆ 90 ಎಂ.ಎಲ್.ನ ಓರಿಜಿನಲ್ ಚಾಯಿಸ್ ವಿಸ್ಕಿ ಹೆಸರಿನ 4 ಸರಾಯಿ ತುಂಬಿರುವ ಪೌಚ್ಗಳು ಒಂದರ ಅ.ಕಿ. 35/- ರೂಪಾಯಿಯಂತೆ ಒಟ್ಟು 140/- ರೂಪಾಯಿ ಬೆಲೆಯುಳ್ಳದ್ದು, ಮತ್ತು ಸರಾಯಿ ಕುಡಿದು ಖಾಲಿ ಮಾಡಿರುವ 90 ಎಂ.ಎಲ್.ನ ಓರಿಜಿನಲ್ ಚಾಯಿಸ್ ವಿಸ್ಕಿ 2 ಖಾಲಿ ಪೌಚ್ಗಳು, ಮತ್ತು ಸರಾಯಿ ಕುಡಿಯಲು ಉಪಯೋಗಿಸಿದ 2 ಪ್ಲಾಸ್ಟಿಕ್ ಗ್ಲಾಸ್ಗಳು ಹಾಗು ಒಂದು ಪ್ಲಾಸ್ಟಿಕ್ ಮಗ್ ಇವೇಲ್ಲವುಗಳನ್ನು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಔರಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 124/2022 ಕಲಂ 32, 34 ಕೆಇ ಕಾಯ್ದೆ ಜೊತೆ 273 ಐಪಿಸಿ : -

ದಿನಾಂಕ: 26-08-2022 ರಂದು 10:00 ಗಂಟೆಗೆ ಔರಾದ ಪೊಲೀಸ ಠಾಣೆಯಲ್ಲಿದ್ದಾಗ ಸೇವಾದಾಸ ನಗರ ತಾಂಡಾ ಎಕಂಬಾದಲ್ಲಿ ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದಾರೆಂದು ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ಹಿಡಿದು ವಿಚಾರಿಸಲು ಅವನು ತನ್ನ ಹೆಸರು ಮಂಜು ತಂದೆ ಭವಸಿಂಗ ಪವಾರ ವಯ 57 ವರ್ಷ ಜಾತಿ, ಲಮಾಣಿ ಉದ್ಯೋಗ, ಕೂಲಿ ಕೆಲಸ ಸಾ, ಸೇವಾದಸ ನಗರ ತಾಂಡಾ ಎಕಂಬಾ ಅಂತ ತಿಳಿಸಿದನು. ನಂತರ ಅವನ ವಶದಲ್ಲಿನ ಪ್ಲಾಸ್ಟೀಕ ಚೀಲವನ್ನು ಪರಿಶೀಲಿಸಿ ನೋಡಲು ಎರಡು ಕಳ್ಳಭಟ್ಟಿ ಸರಾಯಿ ತುಂಬಿದ ಬಾಟಲಗಳು ಹೋರಗೆ ಇದ್ದು ಮತ್ತು ಬಿಳಿ ಪ್ಲಾಸಿಟಿಕ್ ಚೀಲದಲ್ಲಿ ನೋಡಲು ಅದರಲ್ಲಿ ಕಳ್ಳ ಭಟ್ಟಿ ಸರಾಯಿ ತುಂಬಿದ ಒಂದು ಲೀಟರಿನ 9 ಪ್ಲಾಸ್ಟಿಕ ಬಾಟಲಗಳು ಇದ್ದು ಇದನ್ನು ಪರೀಶೀಲಿಸಿ ನೋಡಲು ಸದರಿ ಕಳ್ಳ ಭಟ್ಟಿ ಸರಾಯಿ ಮಾನವ ಸೇವನಗೆ ಹಾನಿಕಾರಕ ಎಂದು ಕಂಡು ಬಂದಿರುತ್ತದೆ. ಹತ್ತಿರ ಸರಾಯಿ ಮಾರಾಟ ಮಾಡಲು ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾನೆ. ಮತ್ತು ಇದನ್ನು ಎಕಂಬಾ ಗ್ರಾಮದಲ್ಲಿ ಜನರಿಗೆ ಒಂದು ಲಿಟರಗೆ 200/- ರೂ ಯಂತೆ ಮಾರಾಟ ಮಾಡಲು ಇಟ್ಟುಕೊಂಡಿರುತ್ತೇನೆ ಎಂದು ತಿಳಿಸಿರುತ್ತಾನೆ. ಸದರಿ ವ್ಯಕ್ತಿಯ ಹತ್ತಿರ ಒಂದು ಪ್ಲಾಸ್ಟೀಕ ಚೀಲದಲ್ಲಿ ಸಿಕ್ಕ ಒಂದು ಲೀಟರ್ ನ 11 ಪ್ಲಾಸ್ಟೀಕ ಬಾಟಲ ಕಳ್ಳ ಭಟ್ಟಿ ಸರಾಯಿ ಇದ್ದು ಅದರ ಅಂದಾಜು ಕಿಮ್ಮತ್ತು 2200/- ರೂಗಳು ಆಗುತಿದ್ದು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.